**SC No. 149/2025**
**PW-1**
**CW-1**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

## ಎಸ್.ಸಿ ನಂಃ 149/2025

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಜಕುಮಾರ್ ರಾಥೋಡ | ಪ್ರಾಸಾಃ 1 |
| ತಂದೆಯ ಹೆಸರು | : | ಸಿಂಗಪ್ಪ ರಾಥೋಡ | ಚಾಸಾಃ 1 |
| ವಯಸ್ಸು | : | 33 ವರ್ಷ | ದಿನಾಂಕ : 11.08.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಸಂಯೋಜಕರು, ಸರ್ಕಾರಿ ವಿಶೇಷ ದತ್ತು ಸ್ವೀಕಾರ ಕೇಂದ್ರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಳಗಾವಿ. | |
| ವಾಸಸ್ಥಳ | : | ಕಣಬರಗಿ, ಬೆಳಗಾವಿ | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ಕಳೆದ 4 ವರ್ಷಗಳಿಂದ ಬೆಳಗಾವಿಯ ಸರ್ಕಾರಿ ವಿಶೇಷ ದತ್ತು ಸ್ವೀಕಾರ ಕೇಂದ್ರದಲ್ಲಿ, ಸಂಯೋಜಕರಾಗಿ ಕೆಲಸ ಮಾಡುತ್ತಿದ್ದೇನೆ.

2. ದಿಃ 08.06.2024 ರಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಯಾದ ಶ್ರೀ ಮಹಾಂತೇಶ ಭಜಂತ್ರಿ ಅವರು ನನಗೆ ಕರೆ ಮಾಡಿ ದಿಃ 09.06.2024 ರಂದು

ಕಿತ್ತೂರಿನಿಂದ ಬೆಳಗಾವಿಗೆ 1 ತಿಂಗಳ ಮಗುವನ್ನು ಮಾರಾಟ ಮಾಡಲು ಬರುತ್ತಿದ್ದಾರೆ ಎನ್ನುವ ಮಾಹಿತಿಯನ್ನು ಕೊಟ್ಟರು. ಆ ಬಳಿಕ ನಾನು, ಚಾಸಾ-24 ರಿಂದ ಚಾಸಾ-27 ರವರನ್ನು ಒಳಗೊಂಡ ಒಂದು ತಂಡವನ್ನು ರಚಿಸಿದೆವು. ಈ ವಿಷಯವನ್ನು ನಾನು ಮಾಳಮಾರುತಿ ಪೋಲಿಸ ಠಾಣೆಯ ಅಧಿಕಾರಿಗಳಿಗೆ ತಿಳಿಸಿದೆನು. ಆ ಬಳಿಕ ನಾವು ಮಗುವನ್ನು ತೆಗೆದುಕೊಳ್ಳುವ ಬಗ್ಗೆ ನಟನೆ ಮಾಡುವ ಸಲುವಾಗಿ ಚಾಸಾ-24 ಮತ್ತು ಚಾಸಾ-27 ರವರಿಗೆ ತಂದೆ ತಾಯಿ ಎಂದು ನಟಿಸಬೇಕು ಎಂದು ಕೇಳಿಕೊಂಡಿದ್ದೇವು. ಅದೇ ದಿನ ರಾತ್ರಿ ಚಾಸಾ-27 ರವರು 1ನೇ ಆರೋಪಿಗೆ ಪೋನ್ ಮಾಡಿ ತನಗೆ ಮಗು ಬೇಕು ಎಂದು ತಿಳಿಸಿದಳು. ಆ ಬಳಿಕ ಚಾಸಾ-27 ರವರು 1ನೇ ಆರೋಪಿಯಿಂದ 1 ಲಕ್ಷ 40 ಸಾವಿರ ರೂಪಾಯಿಗೆ ಮಗುವನ್ನು ಖರೀದಿಸಲು ಸಿದ್ದಳಿರುವುದಾಗಿ ತಿಳಿಸಿದರು. 1ನೇ ಆರೋಪಿಯು ಚಾಸಾ-27 ರವರಿಗೆ ಆಕೆ ಮತ್ತು ಆಕೆಯ ಗಂಡನೊಂದಿಗೆ ಶಿವಬಸವ ನಗರದ ನಿಸರ್ಗ ದಾಬಾದ ಬಳಿ ಬರಲು ತಿಳಿಸಿದರು.

3. ಆ ಪ್ರಕಾರ ದಿಃ 09.06.2024 ರಂದು ಬೆಳಿಗ್ಗೆ 5-30 ರಿಂದ 6-00 ಗಂಟೆಯ ಸುಮಾರಿಗೆ ನಾವು ಆ ಸ್ಥಳಕ್ಕೆ ಹೋಗಿದ್ದೆವು. ಆ ಸಮಯಕ್ಕೆ ಬಾಗೇವಾಡಿ ಕಡೆಯಿಂದ ಒಂದು ವ್ಯಾಗೆನಾರ್ ಕಾರ್ ಆ ಸ್ಥಳಕ್ಕೆ ಬಂದಿತ್ತು. ಆ ಕಾರಿನ ನೊಂದಣಿ ಸಂಖ್ಯೆ ಕೆ ಎ 22 ಎಮ್ ಸಿ 8906 ಆಗಿತ್ತು. 1ನೇ ಆರೋಪಿಯು ಮೊದಲು ಆಕೆಗೆ ಹಣವನ್ನು ಕೊಡಬೇಕು ಮತ್ತು ಆ ಬಳಿಕ ಮಗುವನ್ನು ಕೊಡುತ್ತೇನೆ ಎಂದು ಹೇಳಿದಳು. ಆಗ ಚಾಸಾ-24 ಮತ್ತು ಚಾಸಾ-27 ರವರು ಸೇರಿ 1ನೇ ಆರೋಪಿಯಿಂದ ಮಗುವನ್ನು ಪಡೆದುಕೊಂಡರು. ಆ ಕಾಲಕ್ಕೆ ನಾವು ಮತ್ತು ಮಾಳಮಾರುತಿ ಪೋಲಿಸ್ ಠಾಣೆಯ ಸಿಬ್ಬಂದಿ ಅಲ್ಲಿಗೆ ಹೋಗಿ ಆ ಮಗುವನ್ನು ಮತ್ತು 1ನೇ ಆರೋಪಿಯನ್ನು ಹಿಡಿದು ಆ ಬಳಿಕ ಪೋಲಿಸರು ಅವರನ್ನು ಮಾಳಮಾರುತಿ ಪೋಲಿಸ್ ಠಾಣೆಗೆ ಕರೆದುಕೊಂಡು ಬಂದಿದ್ದರು. ಆ ಕಾಲಕ್ಕೆ 1ನೇ ಆರೋಪಿಯೊಂದಿಗೆ ಆಕೆಯ ಮಗಳು ಇದ್ದು, ನನಗೆ ಆಕೆಯ ಹೆಸರು ನೆನಪಿಲ್ಲ. ಮಗುವಿನ ಆರೋಗ್ಯದ ಸ್ಥಿತಿ

ಸರಿಯಾಗಿಲ್ಲವಾದ್ದರಿಂದ ಆ ಮಗುವನ್ನು ನಾವು ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಿದೆವು. ಆ ಬಳಿಕ ನಾನು ನನ್ನ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಒಂದು ಪಿರ್ಯಾದಿಯನ್ನು ಕೊಟ್ಟಿದ್ದೆನು. ಆ ಪಿರ್ಯಾದಿಯನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಗಿದೆ.

4. 1ನೇ ಆರೋಪಿಯನ್ನು ನಾವು ವಿಚಾರಿಸಿದಾಗ ಆಕೆ ಆ ಮಗು ತನ್ನದಲ್ಲ ಮತ್ತು ತಾನು ಆ ಮಗುವನ್ನು ಬೇರೆಯವರಿಂದ ಪಡೆದುಕೊಂಡು ತಂದಿರುವುದಾಗಿ ಹೇಳಿದ್ದು, ಆಕೆ ಒಂದು ಡಾಕ್ಟರ ಅವರ ಹೆಸರನ್ನು ಹೇಳಿದ್ದರು. ಆ ಹೆಸರು ನನಗೆ ಈಗ ನೆನಪಿಲ್ಲ. 1ನೇ ಆರೋಪಿಯು ತಾನು ಆ ಮಗುವನ್ನು ರೂ. 50-60 ಸಾವಿರ ರೂಪಾಯಿಗೆ ಖರೀದಿ ಮಾಡಿರುವುದಾಗಿ ಹೇಳಿದ್ದಳು. ಆ ಬಳಿಕ ಮಾಳಮಾರುತಿ ಪೋಲಿಸರು ನನ್ನನ್ನು ಘಟನೆ ನಡೆದ ಸ್ಥಳವಾದ ನಿಸರ್ಗ ದಾಬಾದ ಬಳಿ ಪಂಚನಾಮೆ ಮಾಡುವ ಸಲುವಾಗಿ ಕರೆದುಕೊಂಡು ಹೋಗಿದ್ದರು. ನಾವು ಆ ಸ್ಥಳಕ್ಕೆ ಹೋದಾಗ ಮಧ್ಯಾಹ್ನ 2-00 ರಿಂದ 3-00 ಗಂಟೆಯಾಗಿತ್ತು. ಆ ಪಂಚನಾಮೆ ಮಾಡುವ ಕಾಲಕ್ಕೆ ಇನಿಬ್ಬರು ವ್ಯಕ್ತಿಗಳು ಇದ್ದು ಅವರು ಹೆಸರು ನನಗೆ ನೆನಪಿಲ್ಲ. ಆ ಸ್ಥಳದಲ್ಲಿ ಮಗುವನ್ನು ಮಾರಾಟ ಮಾಡಿದ್ದು ಎಂದು ನಾನು ತೋರಿಸಿದ್ದು, ಪೋಲಿಸರು ಅಲ್ಲಿ ಪಂಚನಾಮೆಯನ್ನು ಮಾಡಿದ್ದರು. 1ನೇ ಆರೋಪಿಯನ್ನು ನೋಡಿದ್ದಲ್ಲಿ ನಾನು ಗುರುತಿಸುತ್ತೇನೆ. ಸಾಕ್ಷಿಯು ಈಗ ನ್ಯಾಯಾಲಯದ ಮುಂದೆ 7 ಆರೋಪಿತರ ಪೈಕಿ 1ನೇ ಆರೋಪಿಯನ್ನು ಗುರುತಿಸಿರುತ್ತಾರೆ.

**SC No. 149/2025**
**PW-1**
**CW-1**

ಪಾಟೀ ಸವಾಲುಃ 1ನೇ ಆರೋಪಿತರ ಪರವಾಗಿಃ ಶ್ರೀ. ಸಿ. ಎ. ಟಿ. ವಕೀಲರಿಂದಃ

( ಈ ಸಂದರ್ಭದಲ್ಲಿ 1ನೇ ಆರೋಪಿ ಪರ ವಕೀಲರು ಸಿ ಆರ್ ಪಿ ಸಿ ಯ ಕಲಂ 231(2) ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಆ ಕಾರಣದಿಂದ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.